**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೦೭.೦೫.೨೦೧೪ರಂದು ನಡೆದ ಪ್ರಶಾಸನ ಸಮಿತಿ ೨೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೧ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೇ ೦೭, ೨೦೧೪ರ ಬುಧವಾರ ಬೆಳಿಗ್ಗೆ ೦೯.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಇ. ರಾಧಾಕೃಷ್ಣ,** ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ಬೆಂಗಳೂರು | ಸದಸ್ಯರು |
| ೪. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೫. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೬. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ, ಕಸಂವಿ | ಸದಸ್ಯರು |
| ೭. | **ಪ್ರೊ. ವಿ. ಗಿರೀಶ್‌ಚಂದ್ರ,** ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೧. | **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1:** **ಪ್ರಶಾಸನ ಸಮಿತಿ ಇಪ್ಪತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 03.03.2014ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಇಪ್ಪತ್ತನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಯುಜಿಸಿ ವೇತನಶ್ರೇಣಿಯ ಬೋಧಕ ಸಹ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಅವರು ಹುದ್ದೆಯ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ರಾಜ್ಯ ವೇತನಶ್ರೇಣಿಯ ಉಪನಿರ್ದೇಶಕ ಹಾಗೂ ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ವಿಷಯ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. **ವಿಷಯ ಸಂಖ್ಯೆ 7**ಕ್ಕೆ ಸಂಬಂಧಿಸಿದಂತೆ 2014–15ನೇ ಸಾಲಿನಿಂದ

ಏಕರೂಪದ ಸಾಮಾನ್ಯ ವೇಳಾಪಟ್ಟಿಯನ್ನು ಜಾರಿಗೆ ತರಲು ಕ್ರಮಕೈಗೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 8**ಕ್ಕೆ ಸಂಬಂಧಿಸಿದಂತೆ ಎಂ.ಫಿಲ್–ವಿಶಿಷ್ಟಾಚಾರ್ಯ ತರಗತಿಗಳಿಗೆ ಸಹಾಯಕ ಪ್ರಾಧ್ಯಾಪಕರನ್ನು ಮಾರ್ಗದರ್ಶಕರಾಗಿ ನಿಯೋಜಿಸಿ ಆದೇಶಿಸಲಾಗಿದೆ. **ವಿಷಯ ಸಂಖ್ಯೆ 9** ಮತ್ತು **10**ಕ್ಕೆ ಸಂಬಂಧಿಸಿದಂತೆ ಶೋಕಾಸ್ ನೋಟೀಸನ್ನು ರದ್ದುಗೊಳಿಸಿ ಆದೇಶಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ಪ್ರಶಿಕ್ಷಣ ಪರಿಷತ್ತಿನ 11ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ 11ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.05.2014ರಂದು ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಅನುಮೋದನೆ ನೀಡಿತು.**

**ವಿಷಯ 3: ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಿ.ಲಿಟ್ ಪ್ರದಾನ ಮಾಡುವ ಬಗೆಗೆ.**

ಟಿಪ್ಪಣಿ: ಮಾನ್ಯ ಕುಲಾಧಿಪತಿಗಳ ಅನುಮೋದನೆಯಂತೆ ಈ ಕೆಳಕಂಡ ಐವರು ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ ಉಪಾಧಿಯನ್ನು ನೀಡಲಾಗುತ್ತಿದೆ.

1. **ವಿದ್ವಾನ್ ಎಂ.ಎಸ್. ಬಸವರಾಜಯ್ಯ,** ಮೈಸೂರು ಜಿಲ್ಲೆ (ಶಕ್ತಿವಿಶಿಷ್ಟಾದ್ವೈತ ವೇದಾಂತ ಮತ್ತು ಶೈವ)
2. **ಡಾ. ಎಂ.ಇ. ರಂಗಾಚಾರ್,** ಮೇಲುಕೋಟೆ, ಮಂಡ್ಯ ಜಿಲ್ಲೆ (ವಿಶಿಷ್ಟಾದ್ವೈತ ವೇದಾಂತ ಮತ್ತು ನ್ಯಾಯಶಾಸ್ತ್ರ)
3. **ಪ್ರೊ. ಡಿ. ಪ್ರಹ್ಲಾದಾಚಾರ್ಯ,** ಡಂಬಳ, ಗದಗ ಜಿಲ್ಲೆ (ವೇದಾಂತ ಮತ್ತು ನ್ಯಾಯಶಾಸ್ತ್ರ)
4. **ಡಾ. ಆರ್.ಎಲ್. ಕಶ್ಯಪ್,** ಬೆಂಗಳೂರು (ವೇದ)
5. **ವಿದ್ವಾನ್ ಕೆ.ಜಿ. ಸುಬ್ರಾಯಶರ್ಮಾ,** ಮಂಡ್ಯ ಜಿಲ್ಲೆ (ವೇದ ಮತ್ತು ಅದ್ವೈತ ವೇದಾಂತ)

ನಿರ್ಣಯ: **ಸಭೆಯು ಮೇಲ್ಕಂಡ ಐವರು ಹಿರಿಯ ವಿದ್ವಾಂಸರಿಗೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯ ಮೇರೆಗೆ ಗೌರವ ಡಿ.ಲಿಟ್ ಪ್ರದಾನ ಮಾಡಲು ಸಂತಸ ವ್ಯಕ್ತಪಡಿಸಿತು.**

**ವಿಷಯ 4: ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಡಿ.ಲಿಟ್–ವಿದ್ಯಾವಾಚಸ್ಪತಿ ಉಪಾಧಿಯನ್ನು ಪ್ರದಾನ ಮಾಡುವುದರ ಬಗೆಗೆ.**

ಟಿಪ್ಪಣಿ: 2013–14ನೇ ಸಾಲಿನ ಡಿ.ಲಿಟ್–ವಿದ್ಯಾವಾಚಸ್ಪತಿ ಉಪಾಧಿಗಾಗಿ ನಿಬಂಧವನ್ನು ಸಲ್ಲಿಸಿದ ಈ ಕೆಳಕಂಡ ನಾಲ್ವರು ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್–ವಿದ್ಯಾವಾಚಸ್ಪತಿ ಉಪಾಧಿಯನ್ನು ನೀಡಲಾಗುತ್ತಿದೆ.

1. ಶ್ರೀ ಆರ್. ಸತ್ಯನಾರಾಯಣನ್
2. ಶ್ರೀ ಉಡುಪಿ ರಾಮನಾಥ ಆಚಾರ್ಯ
3. ಶ್ರೀ ಸಿ. ನಂಜುಂಡಯ್ಯ
4. ಶ್ರೀ ವಿರೂಪಾಕ್ಷ ವಿ. ಜಡ್ಡಿಪಾಲ್

ನಿರ್ಣಯ: **ಸಭೆಯು ನಾಲ್ವರಿಗೆ ಡಿ.ಲಿಟ್ ಉಪಾಧಿಯನ್ನು ಪ್ರದಾನ ಮಾಡಲು ಒಪ್ಪಿಗೆ ನೀಡಿತು.**

**ವಿಷಯ 5: 2012–13ನೇ ಸಾಲಿನ ಎಂ.ಫಿಲ್–ವಿಶಿಷ್ಟಾಚಾರ್ಯ ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಎಂ.ಫಿಲ್ ಉಪಾಧಿಗಳನ್ನು ಪ್ರದಾನ ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2012–13ನೇ ಸಾಲಿನಲ್ಲಿ ನಡೆಸಿದ ಎಂ.ಫಿಲ್–ವಿಶಿಷ್ಟಾಚಾರ್ಯ ಪದವಿಯಲ್ಲಿ ಉತ್ತೀರ್ಣರಾದ **18 ವಿದ್ಯಾರ್ಥಿಗಳಿಗೆ ಎಂ.ಫಿಲ್–ವಿಶಿಷ್ಟಾಚಾರ್ಯ** ಉಪಾಧಿಯನ್ನು ತೃತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತಿದೆ. 18 ವಿದ್ಯಾರ್ಥಿಗಳ ಪೈಕಿ ಅತಿಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗೆ ಸರ್ವೋತ್ಕೃಷ್ಟ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ.

| | | |
|---|---|---|
| 1. ಗಣಪತಿ ಭಟ್ | 2. ಶ್ರೀಕೃಷ್ಣ ಶ್ರೀ ಕೊರ್ಲಹಳ್ಳಿ | 3. ಉದ್ದಣ್ಣ ಕೆ.ಇ. |
| 4. ಮೋಹನ ಭೈರವ ಪಿ.ಬಿ. | 5. ಕಿರಣ ಶರ್ಮಾ | 6. ಉಷಾ ನರಸಿಂಹನ್ |
| 7. ಎ. ನರಸಿಂಹನ್ | 8. ಕವಿತಾ ಭಟ್ | 9. ನಲಿನಿ ಹೆಚ್.ಎಂ. |
| 10. ಡಾ. ಭಾಗ್ಯಲಕ್ಷ್ಮಿ ವಿ. ಭಟ್ | 11. ಅನುರಾಧಾ ಎನ್. ಜೋಶಿ | 12. ವಿನಯ್ ಪಡಸಲಗಿ |

13. ವೇಣುಗೋಪಾಲ ಪುರೋಹಿತ್ 14. ಗೌರಿ ಹೆಗ್ಡೆ 15. ರೂಪಾ ಹೆಗ್ಡೆ
16. ಸಲಗರ ರಮೇಶ 17. ಅನಂತ ಕುಮಾರ ದೇಸಾಯಿ 18. ಸುಜೇಂದ್ರ ಎನ್.

ಅತಿಹೆಚ್ಚು ಅಂಕ ಪಡೆದು 'ಸರ್ವೋತ್ಕೃಷ್ಟ ಪ್ರಮಾಣಪತ್ರ' ಪಡೆಯುತ್ತಿರುವ ವಿದ್ಯಾರ್ಥಿನಿ: **ರೂಪಾ ಹೆಗ್ಡೆ**

ನಿರ್ಣಯ: **ಹದಿನೆಂಟು ಎಂ.ಫಿಲ್ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಹಾಗೂ ಅತಿಹೆಚ್ಚು ಅಂಕ ಪಡೆದ ರೂಪಾ ಹೆಗಡೆ ಅವರಿಗೆ ಸರ್ವೋತ್ಕೃಷ್ಟ ಪ್ರಮಾಣಪತ್ರ ನೀಡಲು ಸಭೆಯು ಅನುಮೋದಿಸಿತು.**

**ವಿಷಯ 6: ಆಯಾ ಶಾಸ್ತ್ರಭಾಗಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣಪದಕವನ್ನು ನೀಡುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನ ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದ ಹನ್ನೆರಡು (12) ವಿದ್ಯಾರ್ಥಿಗಳಿಗೆ ವಿವಿಧ ಸಂಸ್ಥೆಗಳು ಸ್ಥಾಪಿಸಿರುವ ದತ್ತಿನಿಧಿ ಮೊತ್ತದ ಬಡ್ಡಿ ರೂ. 1,36,448/–ಗಳು ಸ್ವೀಕೃತಿಯಾಗಿದೆ. ಹೊಸದಾಗಿ ಸ್ವರ್ಣಪದಕ ದತ್ತಿನಿಧಿ ಸ್ಥಾಪಿಸಿದ 'ಉತ್ತರಾದಿ ಮಠ, ಬೆಂಗಳೂರು' ಇವರು 2012–13ನೇ ಸಾಲಿನಲ್ಲಿ ಸ್ವರ್ಣಪದಕ ನೀಡಲು ರೂ. 10,000/–ಗಳನ್ನು ನೀಡಿರುತ್ತಾರೆ. ಅಂತೆಯೇ ಶಿರಸಿ ಗುರುಶಾಂತಶಾಸ್ತ್ರೀ ಅವರ ಹೆಸರಿನಲ್ಲಿ 2012–13ನೇ ಸಾಲಿನ ಸ್ವರ್ಣಪದಕ ನೀಡಲು ರೂ. 10,000/–ಗಳನ್ನು ನೀಡಿದ್ದಾರೆ. ಒಟ್ಟಾರೆಯಾಗಿ 2012–13ನೇ ಸಾಲಿನಲ್ಲಿ ಸ್ವರ್ಣಪದಕವನ್ನು ನೀಡಲು **ರೂ. 1,56,448**/–ಗಳು ಲಭ್ಯವಿದ್ದು, ಈ ಮೊತ್ತದ ಮಿತಿಯಲ್ಲಿ ಸ್ವರ್ಣಪದಕವನ್ನು ನೀಡಲಾಗುತ್ತಿದೆ ಹಾಗೂ ದತ್ತಿನಿಧಿ ಸ್ವರ್ಣಪದಕ ವಿವರಗಳು, ಹನ್ನೆರಡು ವಿದ್ಯಾರ್ಥಿಗಳು ಮತ್ತು ಶಾಸ್ತ್ರಭಾಗಗಳ ವಿವರ ಕೆಳಗಿನಂತಿದೆ:

| **ಕ್ರ.ಸಂ** | **ದತ್ತಿ** | **ಶಾಸ್ತ್ರ** | **ವಿದ್ಯಾರ್ಥಿಯ ಹೆಸರು** | **ಶೇಕಡ** | **ಕಾಲೇಜು** |
|---|---|---|---|---|---|
| 1 | ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮ ಅವಧೂತಪೀಠ ಸ್ವರ್ಣಪದಕ | ವ್ಯಾಕರಣ | ಶಶಿಧರ್ ಭಟ್ | 76.7% | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 2 | ಶ್ರೀ ವಿಶ್ವೇಶತೀರ್ಥಸ್ವಾಮೀಜಿ ಸ್ವರ್ಣಪದಕ | ನ್ಯಾಯ | ಸುಶೀಲೇಂದ್ರ ಶ್ರೀಪಾದ ಗೊಗ್ಗಿ | 73.1% | ಪೂರ್ಣಪ್ರಜ್ಞವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 3 | ಪದ್ಮಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸ್ವರ್ಣಪದಕ | ಅಲಂಕಾರ | ದತ್ತಾತ್ರೇಯ ಹೆಗಡೆ | 82% | ಶ್ರೀಮಾತಾ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಉಮ್ಮಚಗಿ |
| 4 | ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ವರ್ಣ ಪದಕ | ಧರ್ಮಶಾಸ್ತ್ರ | ಪ್ರಕಾಶ ಹೆಗಡೆ | 60% | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 5 | ಪಂಡಿತರತ್ನಂ ಶ್ರೀ ಕುಣಿಗಲು ರಾಮಶಾಸ್ತ್ರೀ ಸ್ವರ್ಣಪದಕ | ಪೂರ್ವ ಮೀಮಾಂಸಾ | ವಿಘ್ನೇಶ್ವರ ಭಟ್ | 78.8% | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 6 | ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಸ್ವರ್ಣ ಪದಕ | ಜ್ಯೋತಿಷ್ಯ | ಶ್ರೀಶ | 76% | ಶ್ರೀಮನ್ ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ |
| 7 | ಶ್ರೀ ಮಹರ್ಷಿ ದೈವರಾತ ಸ್ವರ್ಣಪದಕ | ಋಗ್ವೇದ | ಉದಯ ತಮ್ಮಯ್ಯ ವೈದ್ಯ | 91.1% | ಶ್ರೀ ಮೇಧಾ ದಕ್ಷಿಣಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ |
| 8 | ಡಾ. ಅಂಬಳೆ ವೆಂಕಟಸುಬ್ಬಯ್ಯ ಸ್ವರ್ಣಪದಕ | ಕೃಷ್ಣ ಯಜುರ್ವೇದ | ವೆಂಕಟರಮಣ ಹೆಗಡೆ | 91.3% | ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಸೋಂದಾ, ಸ್ವರ್ಣವಲ್ಲಿ |
| 9 | ಶ್ರೀ ಸತ್ಯಪ್ರಮೋದತೀರ್ಥ ಸ್ವಾಮೀಜಿ ಸ್ವರ್ಣಪದಕ | ದ್ವೈತ | ಬದರೀನಾರಾಯಣ ಕಟ್ಟಿ | 78.8% | ಪೂರ್ಣಪ್ರಜ್ಞವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 10 | ಪದ್ಮಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸ್ವರ್ಣಪದಕ | ಅದ್ವೈತ | ಅರುಣರಾಜ ವಿ | 77.7% | ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |
| 11 | ಶ್ರೀ ಅಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿ ಸ್ವರ್ಣಪದಕ | ವಿಶಿಷ್ಟಾದ್ವೈತ | ಹರಿಪ್ರಸಾದ ವಿ ಆರ್ | 63.5% | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |

| | | | | | |
|---|---|---|---|---|---|
| 12 | ಆಸ್ಥಾನ ಮಹಾವಿದ್ವಾನ್ ಪಂಡಿತರತ್ನಂ ಶಿರಸಿ ಗುರುಶಾಂತಶಾಸ್ತ್ರೀ ಸ್ವರ್ಣಪದಕ | ಶಕ್ತಿವಿಶಿಷ್ಟಾದ್ವೈತ | ಶಿವಕುಮಾರಸ್ವಾಮಿ | 70.4% | ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |

ನಿರ್ಣಯ: **ದಿನಾಂಕ: 07.05.2014ರ ಬೆಳಿಗ್ಗೆ 8.30ಕ್ಕೆ ನಡೆದ ಪ್ರಶಿಕ್ಷಣ ಪರಿಷತ್ತಿನ 11ನೇ ಸಭೆಯಲ್ಲಿ ಮಂಡಿಸಿದ ವಿವರಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಆನಂತರ, ದತ್ತಿನಿಧಿಯಿಂದ ಬಂದ ಬಡ್ಡಿ ಹಣವನ್ನು ಸಭೆಯು ಪರಿಶೀಲಿಸಿತು. ಸಭೆಗೆ ಚಿನ್ನದ ಪದಕದ ಬಗೆಗೆ ವಿವರಣೆಗಳನ್ನು ನೀಡಿದರು. 30 ಗ್ರಾಂ ಬೆಳ್ಳಿ ಹಾಗೂ 2 ಗ್ರಾಂ ಚಿನ್ನ ಬಳಸಲಾಗಿದೆಯೆಂದೂ 2 ಗ್ರಾಂ ಚಿನ್ನದ ಮೇಲೆ ವಿಶ್ವವಿದ್ಯಾಲಯದ ಲಾಂಛನವನ್ನು ಮುದ್ರಿಸಲಾಗಿದೆ ಎಂದೂ ವಿವರಗಳನ್ನು ನೀಡಿದರು. ಬಡ್ಡಿಯಿಂದ ಬಂದ ಮೊತ್ತಕ್ಕೆ ಅನುಗುಣವಾಗಿ 12 ಚಿನ್ನದ ಪದಕ ನೀಡಲು ವ್ಯವಸ್ಥೆಗೊಳಿಸಲಾಗಿದ್ದು, ಅದರ ವಿಶೇಷತೆಗಳನ್ನು ಮತ್ತು ದತ್ತಿನಿಧಿಗಳ ವಿವರಗಳನ್ನು ಮಾನ್ಯ ಕುಲಪತಿಗಳು ಸಭೆಗೆ ನೀಡಿದರು. ಈ ಎಲ್ಲಾ ಅಂಶಗಳಿಗೆ ಸಭೆಯು ಒಪ್ಪಿಗೆ ನೀಡಿತು.**

**ವಿಷಯ 7: 2012–13ನೇ ಸಾಲಿನಲ್ಲಿ ನಡೆದ ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ಉಪಾಧಿಗಳನ್ನು ಪ್ರದಾನ ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2012–13ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **209 ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ** ಹಾಗೂ **164 ವಿದ್ಯಾರ್ಥಿಗಳಿಗೆ ಎಂ.ಎ. ವಿದ್ವದುತ್ತಮಾ** ಉಪಾಧಿಯನ್ನು ತೃತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತಿದೆ.

ನಿರ್ಣಯ: **ಸಭೆಯು 2012–13ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಪಾಧಿಗಳನ್ನು ಪ್ರದಾನ ಮಾಡಲು ಅನುಮೋದನೆಯನ್ನು ನೀಡಿತು.**

**ವಿಷಯ 8: ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಸಹ ಪ್ರಾಧ್ಯಾಪಕರು, ವೇದಾಂತ ನಿಕಾಯ –ಇವರ ವೇತನ ಸಂರಕ್ಷಣೆ ಮಾಡುವ ಬಗೆಗೆ.**

ಟಿಪ್ಪಣಿ: ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ –ಇವರು ದಿನಾಂಕ: 05.03.2014ರಂದು ವೇದಾಂತ ನಿಕಾಯದ ಸಹ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡಿರುತ್ತಾರೆ. ಇದಕ್ಕೆ ಪೂರ್ವದಲ್ಲಿ ಜಗದ್ಗುರು ರಾಮಾನಂದಾಚಾರ್ಯ ರಾಜಸ್ಥಾನ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದು, ಇಲ್ಲಿನ ಸೇವೆಯಿಂದ ಬಿಡುಗಡೆಗೊಳ್ಳುವ ಸಂದರ್ಭದಲ್ಲಿ ರೂ. 53,820/– ಗಳ ಮೂಲವೇತನ ಪಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಹೊಸದಾಗಿ ನೇಮಕವಾದ ಸಹಪ್ರಾಧ್ಯಾಪಕ ಹುದ್ದೆಯ ವೇತನಶ್ರೇಣಿ ರೂ. 37400–67000+9000AGPರ **ಮೂಲವೇತನ ರೂ. 46,400/–** ಬದಲಾಗಿ ಹಿಂದಿನ ವೇತನಶ್ರೇಣಿಯನ್ನು ಸಂರಕ್ಷಣೆ ಮಾಡಿ, ಈ ಹಿಂದೆ ಪಡೆಯುತ್ತಿದ್ದ **ಮೂಲವೇತನ ರೂ. 53,820/–** ಗಳನ್ನು ನೀಡುವಂತೆ ಕೋರಿರುತ್ತಾರೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿತು. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ ಅವರು ಈ ಹಿಂದೆ ಪಡೆಯುತ್ತಿದ್ದ ಮೂಲವೇತನವನ್ನು ಸಂರಕ್ಷಿಸಿ 2014ರ ಮೇ ತಿಂಗಳಿನಿಂದ ವೇತನ ಪಾವತಿಗೆ ಸಭೆ ಅನುಮೋದನೆ ನೀಡಿತು.**

**ವಿಷಯ 9: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿಗೆ ನಿಯೋಜನೆಗೊಂಡಿರುವ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಸ್ಥಳೀಯ ಮನೆ ಬಾಡಿಗೆ ಭತ್ಯೆ ನಿಗದಿಪಡಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 20.01.2014ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 10ನೇ ಸಭೆಯ ನಿರ್ಣಯದಂತೆ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೇಮಕಗೊಂಡಿರುವ ಒಬ್ಬರು ಸಹಪ್ರಾಧ್ಯಾಪಕರು, ಒಬ್ಬರು ಸಹಾಯಕ ಪ್ರಾಧ್ಯಾಪಕರು ಹಾಗೂ ಒಬ್ಬರು ಯೋಜನಾ ಸಹಾಯಕರನ್ನು ಕಛೇರಿ ಆದೇಶ ಸಂಖ್ಯೆ: ಕಸಂವಿ/ಕಾಆ/ಶ್ರೀ.ಮೇ.ದ.ವೇ.ಸಂ.ಕಾ./1/2013–14; ದಿನಾಂಕ: 06.03.2014ರ ಅನ್ವಯ ನಿಯೋಜಿಸಲಾಗಿದ್ದು, ಇವರು ದಿನಾಂಕ: 17.03.2014ರಂದು ಈ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರಿಗೆ ಸ್ಥಳೀಯ ಮನೆ ಬಾಡಿಗೆ ಭತ್ಯೆಯನ್ನು ನಿಗದಿಪಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿತು. ಸ್ಥಳೀಯ ಮನೆ ಬಾಡಿಗೆ ಭತ್ಯೆಯನ್ನು ನಿಗದಿಪಡಿಸಲು ಸಭೆ ಅನುಮೋದನೆ ನೀಡಿತು.**

**ವಿಷಯ 8: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿಗೆ ನಿಯೋಜನೆಗೊಂಡಿರುವ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಸ್ಥಳೀಯ ಮನೆ ಬಾಡಿಗೆ ಭತ್ಯೆ ನಿಗದಿಪಡಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 20.01.2014ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 10ನೇ ಸಭೆಯ ನಿರ್ಣಯದಂತೆ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೇಮಕಗೊಂಡಿರುವ ಒಬ್ಬರು ಸಹಪ್ರಾಧ್ಯಾಪಕರು, ಒಬ್ಬರು ಸಹಾಯಕ ಪ್ರಾಧ್ಯಾಪಕರು ಹಾಗೂ ಒಬ್ಬರು ಯೋಜನಾ ಸಹಾಯಕರನ್ನು ಕಛೇರಿ ಆದೇಶ ಸಂಖ್ಯೆ: ಕಸಂವಿ/ಕಾಆ/ಶ್ರೀ.ಮೇ.ದ.ವೇ.ಸಂ.ಕಾ/1/2013–14; ದಿನಾಂಕ: 06.03.2014ರ ಅನ್ವಯ ನಿಯೋಜಿಸಲಾಗಿದ್ದು, ಇವರು ದಿನಾಂಕ: 17.03.2014ರಂದು ಈ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರಿಗೆ ಸ್ಥಳೀಯ ಮನೆ ಬಾಡಿಗೆ ಭತ್ಯೆಯನ್ನು ನಿಗದಿಪಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಕುಲಸಚಿವರು

ಉಪಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.